ಇ) ಸ್ವಯಂ ಉದ್ಯೋಗ ಅಭ್ಯರ್ಥಿಗಳಿಗೆ ಈ ಯೋಜನೆಯ ಫಲ ದೊರಕಲು ಆಯ್ಕೆ ಸಮಿತಿಯಲ್ಲಿ ಅಧಿಕಾರೇತರರಿಗೆ ಅವಕಾಶ ಕಲ್ಪಿಸಿ ಕೊಡಲಾಗುವುದೇ?

ಶ್ರೀ ನಜೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು): ಅ) 1988-89 1989-90 ಮತ್ತು 1990-91ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ಯೋಜನೆಯಲ್ಲಿ ಒಟ್ಟು 1187 ಜನರಿಗೆ ಉದ್ಯೋಗ ಒದಗಿಸಲಾಗಿದೆ. ವರ್ಷವಾರು ಮಾಹಿತಿ ಕೆಳಕಂಡಂತಿದೆ.

1988-89	564 ಫಲಾನುಭವಿಗಳು.
1989-90	400 ಫಲಾನುಭವಿಗಳು.
1990-91	223 ಫಲಾನುಭವಿಗಳು.
	1187

ಆ) ಈ ಯೋಜನೆಯಲ್ಲಿ ಮೇಲ್ಕಂಡ ಸಾಲುಗಳಲ್ಲಿ ಬಿಡುಗಡೆಯಾದ ಹಣದ ಮೊತ್ತ ರೂ 273.10 ಲಕ್ಷಗಳು ವರ್ಷವಾರು ಹಣದ ಮೊತ್ತ ಈ ಕೆಳಕಂಡಂತಿದೆ

1988-89 ರೂ	130.90 ಲಕ್ಷಗಳು
1989-90 ರೂ	92.80 ಲಕ್ಷಗಳು
1990-91 ರೂ	50.12 ಲಕ್ಷಗಳು
	273.10

ಇ) ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ಕಾರ್ಯಸೂಚಿಯಂತೆ ಅಧಿಕಾರೇತರರಿಗೆ ಆಯ್ಕೆ ಸಮಿತಿಯಲ್ಲಿ ಅವಕಾಶ ಇರುವುದಿಲ್ಲ.

ಕೊಡಗು ಜಿಲ್ಲೆಯಲ್ಲಿ ಔಷಧಿಗಳನ್ನು ಸರಿಯಾಗಿ ವಿತರಣೆ ಮಾಡದಿರುವುದು

3688 - ಶ್ರೀಮತಿ ಸುಮ ವಸಂತ್ (ವೀರಾಜಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ– ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿರುವ ಔಷಧಿಗಳನ್ನು ಸರಬರಾಜು ಮಾಡುವ ಸಲುವಾಗಿ ಕೊಟ್ಟಿರುವ ಹಣದ ಪ್ರಮಾಣವೆಷ್ಟು?

ಆ) ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜನ್ನು ಸೂಕ್ತವಾಗಿ ಪೂರೈಸುತ್ತಿದ್ದರೂ ಗ್ರಾಮಾಂತರ ಪ್ರದೇಶಗಳ ಆಸ್ಪತ್ರೆಗಳಲ್ಲಿ ಔಷಧಿಗಳು ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) ರೂ 20,69,000-00 (1991-92)

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.